Reg. No. | | | | | | | | | | | |

# BCAKALN 401

## IV Semester B.C.A. Examination, July/August 2023
## (NEP 2020) (2022-23 Batch Onwards)
## KANNADA (AECC)
## Kannada Language

Time : 2 Hours                                                                 Max. Marks : 60

I. ಈ ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿರಿ : **(3×8=24)**

1) ಅಲ್ಲಮ ಪ್ರಭುವಿನ ವಚನಗಳಲ್ಲಿ ವ್ಯಕ್ತಗೊಂಡ ವಸ್ತುಧೋರಣೆಯನ್ನು ವಿಶ್ಲೇಷಿಸಿರಿ.

**ಅಥವಾ**

'ನಿರ್ಮಲಧರ್ಮದಿಂದೆ ಪಾಲಿಸು ಧರೆಯಂ' – ಈ ಕಾವ್ಯಭಾಗದ ಆಶಯವೇನು ? ವಿವರಿಸಿರಿ.

2) 'ಹೊರನಾಡ ಕನ್ನಡಿಗ' ಲೇಖನದ ಆಶಯವನ್ನು ಪ್ರಸ್ತುತಪಡಿಸಿರಿ.

**ಅಥವಾ**

'ನಾಗಮ್ಮನ ಮನೆಯ ಸಣ್ಣಗೇಟು' – ಈ ಕಥೆಯ ಆಶಯವನ್ನು ನಿರೂಪಿಸಿರಿ.

3) ಮುಗ್ಧತೆ, ಅಜ್ಞಾನ, ಸಣ್ಣತನಗಳಿಂದಾಗಿ ನಾದಿರಾಳ ಬದುಕು ಆಹುತಿಯಾದ ಬಗೆಯನ್ನು ಕಾದಂಬರಿ ಚಿತ್ರಿಸಿರುವ ರೀತಿಯನ್ನು ಪರಿಶೀಲಿಸಿ.

**ಅಥವಾ**

ಅಳಿಯ ಮತ್ತು ಮಾವನ ಮಾನಸಿಕ ಸಂಘರ್ಷದಿಂದಾಗಿ ನಾದಿರಾಳು ಅನುಭವಿಸಿದ ತೊಂದರೆಗಳ ಪರಿಯನ್ನು ವಿಶದಪಡಿಸಿರಿ.

II. ಈ ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ : **(3×5=15)**

Shri Dharmasthala Manjunatheshwara College of Business Management Library MANGALORE - 575 003

1) ಡಿ.ವಿ.ಜಿ.ಯವರ ಕಗ್ಗದ ತಾತ್ಪರ್ಯವೇನು ?

**ಅಥವಾ**

'ಸತ್ಯನಾಪುರದ ಸಿರಿ' – ಕಾವ್ಯಭಾಗದಲ್ಲಿ ಸಿರಿಯು ಉದಿಸಿ ಬಂದ ವೈಶಿಷ್ಟ್ಯತೆಯನ್ನು ತಿಳಿಸಿ.

2) ಧಾರವಾಡದ ವೈಶಿಷ್ಟ್ಯತೆಗಳನ್ನು 'ರುಚಿ' ಪ್ರಬಂಧದ ಹಿನ್ನೆಲೆಯಲ್ಲಿ ಬರೆಯಿರಿ.

**ಅಥವಾ**

ಕನಸಿನ ಕುರಿತಂತೆ ಜನಪದ ನಂಬಿಕೆಗಳ ಬಗ್ಗೆ ಬರೆಯಿರಿ.

3) 'ಮಹಮದ್ ಖಾನ್'ರವರ ಪಾತ್ರ ಪರಿಚಯ ಮಾಡಿರಿ.

**ಅಥವಾ**

'ನಾದಿರಾಳ' ಪಾತ್ರ ಪರಿಚಯ ಮಾಡಿರಿ.

P.T.O.

III. ಪದ್ಯದ ಭಾವಾರ್ಥ ಮತ್ತು ಸ್ವಾರಸ್ಯವನ್ನು ತಿಳಿಸಿ. (1×5=5)

ನನಗೂ ಗೊತ್ತು ಈ ಕತ್ತಲೆಯ
ಕೊನೆಯಿರದ ಬಾಯಾರಿಕೆ
ಎಷ್ಟೊಂದು ಬೆಳಕನ್ನು ಇದು ಕೊಟ್ಟರೂ
ತಿಂದರೂ ಕುಡಿದರೂ ಇದಕ್ಕೆ ಇನ್ನೂ ಬೇಕು
ಇನ್ನೂ ಬೇಕು ಎನ್ನುವ ಬಯಕೆ.

**ಅಥವಾ**

ಅಲ್ಲಿ ಇಂತಿರಬೇಕು, ಇಂತಿರಬಾರದೆಂಬುದಿಲ್ಲವೈ
ಅಲ್ಲಿ ಹೊರೆ ಹೊಣೆಯಿಲ್ಲ ಶಾಸ್ತ್ರ ವಿಧಿ ನಿಷೇಧಗಳಿಲ್ಲವೈ
ಜಾತಿಗೀತಿಯ ವೇದಭೇದದ ಕಟ್ಟು ಕಟ್ಟಳೆ ನಿಲ್ಲದೈ
ಅಲ್ಲಿ ಪ್ರೀತಿಯೆ ನೀತಿ; ಧರ್ಮಕೆ ಬೇರೆ ಭೀತಿಯ ಸಲ್ಲದೈ !

IV. ಈ ಕೆಳಗಿನ **ಎರಡರ** ಸಂದರ್ಭ ಸ್ವಾರಸ್ಯ ತಿಳಿಸಿರಿ : (2×4=8)

1) ತನ್ನ ಶಾಪಗ್ರಸ್ತ ಸೆರೆಗೆ ತಾನೇ ಪಹರೆ.
2) ನೀನು ದಾನಧರ್ಮವಿತ್ತರೆ ನನ್ನ ಜೋಳಿಗೆ ತುಂಬುದು.
3) ದೇಹವೆಂಬುದೊಂದು ತುಂಬಿದ ಬಂಡಿ ಕಂಡಯ್ಯ.
4) ಧೀರ ಪಥವನೆ ಬೆದಕು ಸಕಲ ಸಮಯದೊಳು.

V. ನೇರವಾಗಿ ಉತ್ತರಿಸಿರಿ. (8×1=8)

1) 'ಪಕ್ಷಿಕಾಶಿ' – ಇದು ಯಾರ ಕೃತಿ ?
2) ಎಂ. ಗೋಪಾಲಕೃಷ್ಣ ಅಡಿಗರ ಹುಟ್ಟೂರು ಯಾವುದು ?
3) ಅಲ್ಲಮ ಪ್ರಭುವಿನ ವಚನಗಳ ಅಂಕಿತ ನಾಮ ಯಾವುದು ?
4) 'ಕಜ್ಜಾಯ' – ಇದು ಯಾರ ಕೃತಿಯಾಗಿದೆ ?
5) 'ಕನಸಿನ ಕತೆ' – ಈ ಲೇಖನದ ಕರ್ತೃ ಯಾರು ?
6) 'ಮಾಯಕದ ಸತ್ಯ' – ಈ ಕಥೆಯನ್ನು ಬರೆದವರು ಯಾರು ?
7) ನಾದಿರಾಳ ತಂದೆಯ ಹೆಸರೇನು ?
8) 'ವಜ್ರಗಳು' – ಇದು ಯಾರ ಕೃತಿಯಾಗಿದೆ ?